ಪತ್ರಿಕೆಗಳಲ್ಲಿ ಯಾವ ರೀತಿ ಪ್ರಿಂಟ್ ಮಾಡುವುದು ಎಂದು ಅವರು ನನ್ನನ್ನು ಕೇಳಿದರು, ಅವರು ಬಳಸಿರುವ ಭಾಷೆಯನ್ನು ಪ್ರಿಂಟ್ ಮಾಡುವುದಕ್ಕಾಗುವುದಿಲ್ಲವೆಂದು ಅವರೇ ಹೇಳಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಮಾತನಾಡಿರುವುದು ಸಹ ರೆಕಾರ್ಡ್ ಆಗಿದೆ.

ಶ್ರೀ ಆರ್. ಎಲ್. ಜಾಲಪ್ಪ.—ಅವರು ಮೆರವಣಿಗೆಯ ಪ್ರಾರಂಭದಿಂದ ಕೊನೆಯವರೆಗೆ ಬಳಸಿರುವಂತಹ ಭಾಷೆಯಲ್ಲಾ ರೆಕಾರ್ಡ್ ಆಗಿದೆ, ಇವೊತ್ತು ಸಹ ಮಧ್ಯಾಹ್ನ ೧೨ ಗಂಟೆಯ ಸಮಯದಲ್ಲಿ ನನ್ನ ಹೆಣವನ್ನು ಅವರು ಎತ್ತು ಕೊಂಡು ಹೋದರೆಂದು ಕೇಳಿದೆ.

ಶ್ರೀ ಯು. ಭೂಪತಿ.—ನೀವೇ ಇಲ್ಲಿರುವಾಗ ನಿಮ್ಮ ಹೆಣವನ್ನು ಅವರು ಯಾವ ರೀತಿ ಎತ್ತು ಕೊಂಡು ಹೋಗುತ್ತಾರೆ ?

ಶ್ರೀ ಆರ್. ಎಲ್. ಜಾಲಪ್ಪ.—ಅವರು ಆ ರೀತಿ ಮಾಡಿದರೆ ನನ್ನ ಆಯುಷ್ಯ ಜಾಸ್ತಿ ಆಯಿತು ಎಂದು ಈ ವಿಷಯ ತಿಳಿಸಿದವರಿಗೆ ಹೇಳಿದೆ.

ಅಧ್ಯಕ್ಷರು.—ಈ ವಿಷಯದ ಮೇಲಿನ ಚರ್ಚೆ, ಉತ್ತರ ಮತ್ತು ವಿವರಣೆ ಇಲ್ಲಿಗೆ ಮುಕ್ತಾಯ ವಾಯಿತು.

ಪ್ರಕಟಣೆ

ಅಧ್ಯಕ್ಷರು.—ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮ ೧೧ಳರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ವಿಧೇಯಕವನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ೧೧-೯-೧೯೮೭ ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ವಿಧೇಯಕ, ೧೯೮೭ ''

ಶ್ರೀ ಎಂ. ಎಸ್. ಕೃಷ್ಣನ್.—ನಾವು ನಿಯಮ ೧೫೬ರ ಮೇರೆಗೆ ಕೊಟ್ಟಿರುವ ಪ್ರಸ್ತಾವನೆಯನ್ನು ತಾವು ಯಾವಾಗ ತೆಗೆದುಕೊಳ್ಳುತ್ತೀರಿ ?

ಅಧ್ಯಕ್ಷರು.—ಸಭೆ ಒಪ್ಪಿದರೆ ಅದನ್ನು ಸಹ ತೆಗೆದುಕೊಳ್ಳುತ್ತೇನೆ, ಈಗ ಒಂದು ವರದಿ ಇದೆ. ಅದನ್ನು ಓದಿ ಹೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದಕ್ಕೂ ಮೊದಲು ನಾನು ತಮ್ಮ ಗಮನಕ್ಕೆ ಕೆಲವು ವಿಚಾರಗಳನ್ನು ತರುತ್ತೇನೆ. ಏನೆಂದರೆ, ಇಲ್ಲಿಯವರೆಗೆ ತಾವು ಅಧಿವೇಶನವನ್ನು ನಡೆಸಿಕೊಂಡು ಬಂದಿದ್ದೀರಿ. ಈ ಸಲದ ಅಧಿವೇಶನ ವಿಶೇಷವಾದ ಒಂದು ಸಂದರ್ಭದಲ್ಲಿ ನಡೆಯಿತು. ತಾವು ಬಿಸ್ನೆಸ್ ಅಡ್ವೈಜರಿ ಕಮಿಟಿ ಮೀಟಿಂಗ್ ಕರೆದು ಆಲ್ಲಿ ಇಂತಿಂಥ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಗುತ್ತದೆಂದು ಹೇಳುವವರೆಗೂ ಸಹ ನಮಗೆ ಇಲ್ಲಿನ ಕಾರ್ಯಕಲಾಪಗಳ ವಿವರಗಳೇನೆಂಬುದು ಗೊತ್ತಿರಲಿಲ್ಲ. ತಾವು ನಮಗೆ ಮೊದಲೇ ಕಾರ್ಯಕಲಾಪಗಳ ವಿವರಗಳನ್ನು ತಿಳಿಸಿರಲಿಲ್ಲ. ನಾನು ಇಲ್ಲಿ ೧೯೫೭ ರಿಂದಲೂ ಇದ್ದೇನೆ. ೧೯೫೨ ರಿಂದ ಇಲ್ಲಿಯವರೆಗೆ ಪ್ರತಿ ವರ್ಷವೂ ಎಷ್ಟೆಷ್ಟು ದಿವಸಗಳ ಕಾಲ ಸಭೆ ನಡೆದಿದೆ, ಈ ವರ್ಷ ಎಷ್ಟು ದಿವಸಗಳ ಕಾಲ ನಡೆದಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ನನ್ನಲ್ಲಿರುವ ಮಾಹಿತಿ ಪ್ರಕಾರ ೧೯೫೨ ರಲ್ಲಿ ಎರಡು ಸಲ ಅಧಿವೇಶನ ನಡೆದಿದೆ. ಮತ್ತು ಒಟ್ಟು ೨೯ ದಿವಸಗಳು ಸಭೆ ನಡೆದಿದೆ. ೧೯೫೩ರಲ್ಲಿ ಮೂರು ಸಲ ಅಧಿವೇಶನ ನಡೆದಿದೆ. ಆ ವರ್ಷ ಒಟ್ಟು ೪೯ ದಿವಸಗಳ ಕಾಲ ಸಭೆ ನಡೆದಿದೆ ಮತ್ತೆ ೧೯೫೪ರಲ್ಲಿ ನಾಲ್ಕು ಸಲ ಅಧಿವೇಶನ ನಡೆದಿದೆ. ಆಗ ಒಟ್ಟು ೬೦ ದಿವಸಗಳ ಕಾಲ ಸಭೆ ನಡೆದಿದೆ.

೧೯೫೫ ರಲ್ಲಿ ೭೧ ದಿವಸ ನಡೆದಿದೆ, ೩ ಸೆಷನ್ ಆಗಿದೆ. ೧೯೫೬ ರಲ್ಲಿ ೪೬ ದಿವಸ ನಡೆದಿದೆ. ೨ ಸೆಷನ್. ೧೯೫೭ ರಿಂದ ಹೆಚ್ಚೂ ಕಡಿಮೆ ನಾನು ಇದ್ದೇನೆ. ೧೯೫೭ ರಲ್ಲಿ ೨ ಸೆಷನ್ ಆಗಿದೆ, ಬೊಟ್ ಅನ್ ಅಕೌಂಟ್ ತೆಗೆದುಕೊಂಡಿದ್ದಾರೆ ೬೨ ದಿವಸ ಆಗಿದೆ. ೧೯೫೮ ರಲ್ಲಿ ೭೮ ದಿವಸ ನಡೆದಿದೆ, ೨ ಸೆಷನ್ ಆಗಿದೆ. ೧೯೫೯ರಲ್ಲಿ ೬೩ ದಿವಸ ನಡೆದಿದೆ ೨ ಸೆಷನ್ ಆಗಿದೆ. ೧೯೬೦ರಲ್ಲಿ ೬೫ ದಿವಸ ನಡೆದಿದೆ, ೩ ಸೆಷನ್ ಆಗಿದೆ. ೧೯೬೧ ರಲ್ಲಿ ೯೨ ದಿವಸ ನಡೆದಿದೆ, ೪ ಸೆಷನ್ ಆಗಿದೆ. ಅದರಲ್ಲೂ ಬಜೆಟ್ ಸೆಷನ್

ಒಂದೂವರೆ ತಿಂಗಳು ನಡೆದಿದೆ. ೧೯೬೨ ರಲ್ಲಿ ೫ ಸೆಷನ್ ಆಗಿದೆ, ೭೪ ದಿವಸ ನಡೆದಿದೆ. ೧೯೬೩ ರಲ್ಲಿ ೩ ಸಲ ಸೆಷನ್ ನಡೆದಿದೆ, ೯೮ ದಿವಸ ನಡೆದಿದೆ. ೧೯೬೪ ರಲ್ಲಿ ೫೯ ದಿವಸ ನಡೆದಿದೆ. ೧೯೬೫ ರಲ್ಲಿ ೬೬ ದಿವಸ ನಡೆದಿದೆ, ೨ ಸೆಷನ್ ಆಗಿದೆ. ೧೯೬೬ ರಲ್ಲಿ ೩ ಸಲ ಆಗಿದೆ ೬೮ ದಿವಸ ನಡೆದಿದೆ. ೧೯೬೭ ರಲ್ಲಿ ೪ ಸಲ ನಡೆದಿದೆ, ೬೮ ದಿವಸ ನಡೆದಿದೆ. ೧೯೬೮ ರಲ್ಲಿ ೨ ಸಲ ಸೆಷನ್ ನಡೆದಿದೆ, ೫೭ ದಿವಸ ನಡೆದಿದೆ. ೧೯೬೯ ರಲ್ಲಿ ೨ ಸಲ ಸೆಷನ್ ಆಗಿದೆ, ೬೪ ದಿವಸ ನಡೆದಿದೆ. ೧೯೭೦ ರಲ್ಲಿ ಮಧ್ಯೆ ಅಸೆಂಬ್ಲಿ ಇರಲಿಲ್ಲ. ೪ ಸಲ ನಡೆದಿದೆ, ೬೩ ದಿವಸ ನಡೆದಿದೆ. ೧೯೭೧ ರಲ್ಲಿ ಒಂದು ಸಲ ನಡೆದಿದೆ. ೧೯೭೨ ರಲ್ಲಿ ೫ ಸಲ ಆಗಿದೆ, ೬೪ ದಿವಸ ನಡೆದಿದ ೧೯೭೩ ರಲ್ಲಿ ೬ ಸಲ ನಡೆದಿದೆ, ೯೭ ದಿವಸ ನಡೆದಿದೆ. ೧೯೭೪ ರಲ್ಲಿ ೪ ಸಲ ಆಗಿದೆ, ೬೩ ದಿವಸ ಆಗಿದೆ. ೧೯೭೫ ರಲ್ಲಿ ೨ ಸಲ ಆಗಿದೆ, ೫೪ ದಿವಸ ನಡೆದಿದೆ. ೧೯೭೬ ರಲ್ಲಿ ೭೩ ದಿವಸ ನಡೆದಿದೆ, ೫ ಸಲ ನಡೆದಿದೆ. ೧೯೭೭ ರಲ್ಲಿ ೪೭ ದಿವಸ ನಡೆದಿದೆ, ೪ ಸಲ ಸೆಷನ್ ಆಗಿದೆ. ೧೯೭೮ ರಲ್ಲಿ ೬೫ ದಿವಸ ನಡೆದಿದೆ. ೪ ಸಲ ಸೆಷನ್ ಆಗಿದೆ. ೧೯೭೯ ರಲ್ಲಿ ೫ ಸಲ ಆಗಿದೆ, ೬೫ ದಿವಸ ನಡೆದಿದೆ ೧೯೮೦ ರಲ್ಲಿ ೬೬ ದಿವಸ ನಡೆದಿದೆ, ೫ ಸಲ ಸೆಷನ್ ಆಗಿದೆ. ೧೯೮೧ ರಲ್ಲಿ ೬೭ ದಿವಸ ನಡೆದಿದೆ, ೩ ಸಲ ಸೆಷನ್ ಆಗಿದೆ. ೧೯೮೨ ರಲ್ಲಿ ೫ ಸಲ ಸೆಷನ್ ನಡೆದಿದೆ, ೭೪ ದಿವಸ ನಡೆದಿದೆ. ೧೯೮೩ ರಲ್ಲಿ ೩ ಸಲ ಸೆಷನ್ ಆಗಿದೆ, ೫೧ ದಿವಸ ನಡೆದಿದೆ. ೧೯೮೪ ರಲ್ಲಿ ೨ ಸಲ ಸೆಷನ್ ಆಗಿದೆ, ೫೧ ದಿವಸ ನಡೆದಿದೆ. ೧೯೮೫ ರಲ್ಲಿ ೪೫ ದಿವಸ ನಡೆದಿದೆ, ೧೯೮೬ ರಲ್ಲಿ ೪೨ ದಿವಸ ನಡೆದಿದೆ ೧೯೮೭ ರಲ್ಲಿ ಈಗ ೩೯ ದಿವಸ ನಡೆದಿದೆ. ಇಂತಿಂಥ ವರ್ಷ ಇಷ್ಟಿಷ್ಟು ದಿವಸ ನಡೆದಿದೆ. ನಾನು ಇದನ್ನು ಏಕೆ ಹೇಳಂತಿದ್ದೇನೆಂದರೆ, ನಾವು ಏನಾದರೂ ಪಾರ್ಟಿ ಮೀಟಿಂಗ್ ಇರುವಾಗ ಬೆಳಿಗ್ಗೆ ೯ ಗಂಟೆಗೆ ಬರಬೇಕಾಗುತ್ತದೆ, ಸಾಯಂಕಾಲ ೮ ಗಂಟೆವರೆಗೆ ನಾವು ಇಲ್ಲಿ ಕುಳಿತುಕೊಂಡಿರುತ್ತೇವೆ. ಒಂದು ವೇಳೆ ಪಾರ್ಟಿ ಮೀಟಿಂಗ್ ಇಲ್ಲ ಅಂದರೆ ಹತ್ತೂವರೆ–ಹನ್ನೊಂದು ಗಂಟೆಗೆ ಬರುತ್ತೇವೆ. ಇಲ್ಲಿ ನಮ್ಮನ್ನು ೮ ಗಂಟೆವರೆಗೆ ಕೂಡಿಸುತ್ತೀರಿ. ಹೀಗಾಗಿ ಒಂದು ದಿವಸ ಒಂದು ಬಿಲ್ ನಮ್ಮ ಪಾರ್ಟಿಯಲ್ಲಿ ಚರ್ಚೆ ಆಗುವುದಕ್ಕೆ ಸಾಧ್ಯವಿಲ್ಲ. ಹಿಂದೆ ಯಾವಾಗಲೂ ಬಿಲ್ ಬಗ್ಗೆ ಪಾರ್ಟಿ ಮೀಟಿಂಗ್‌ನಲ್ಲಿ ಚರ್ಚೆ ಮಾಡಿ ಇಲ್ಲಿ ಬಂದು ಹೇಳುತ್ತಿದ್ದೆವು. ಈಗ ನಾವು ಬರೀ ಕಾನೂನಿಗೆ ಒಳಪಟ್ಟು ಬಿಲ್‌ಗಳನ್ನು ಪಾಸ್ ಮಾಡಿ ಅವು ಹೊರಟುಹೋದರೆ ಜನಗಳ ಮೇಲೆ ಅದರ ಹೊರೆ ಬೀಳುತ್ತದೆ. ನಾವು ಕೂಲಂಕುಷವಾಗಿ ಚರ್ಚೆ ಮಾಡಿ ಮಾಡುವುದಕ್ಕೆ ಆಗುತ್ತಿಲ್ಲ. ನಿನ್ನೆ ದಿವಸ ಬರೀ ಎಸ್.ಸಿ.ಎಸ್.ಟಿ, ವ್ಯತ್ಯಾಸದಲ್ಲಿ 'ಅಂಡ್–ಆರ್' ಎನ್ನುವುದನ್ನು ಎಷ್ಟು ಚರ್ಚೆಯಾಯಿತು. ಆಮೇಲೆ ಅದನ್ನು ಕರೆಕ್ಟ್ ಮಾಡಿಕೊಳ್ಳುತ್ತೇನೆ ಎಂದು ಮಾನ್ಯ ಮಂತ್ರಿಗಳು ಹೇಳಿದರು, ಇದುವರೆಗೆ ಕರೆಕ್ಷನ್ ಬರಲಿಲ್ಲ. ಹೀಗೆ ಅನೇಕ ಜನರಿಗೆ ಅನೇಕ ತರಹ ಅನ್ಯಾಯವಾಗುತ್ತದೆ, ಮೋಸವಾಗುತ್ತದೆ. ಆದ್ದರಿಂದ ದಯಮಾಡಿ ನಾನು ಕೇಳುವುದು ಏನೆಂದರೆ, ಹಾಗೇನಾದರೂ ನಿಮಗೆ ಕಷ್ಟವಾಯಿತು ಅಂದರೆ ಹಿಂದೆ ಯಾವ ರೀತಿ ಓಟ್ ಅನ್ ಅಕೌಂಟ್ ತೆಗೆದುಕೊಳ್ಳುತ್ತಿದ್ದರೋ ಆ ರೀತಿ ತೆಗೆದುಕೊಳ್ಳಲಿ. ಈ ಅಸೆಂಬ್ಲಿ ಇರುವುದು ಏತಕ್ಕೆ ? ಜನಗಳ ಕಷ್ಟಸುಖ ಚರ್ಚೆ ಆಗಬೇಕು, ಒಂದು ಲಕ್ಷ ಜನರ ಪ್ರತಿನಿಧಿಯಾಗಿ ನಾವು ಇಲ್ಲಿಗೆ ಬರುತ್ತೇವೆ. ಇಲ್ಲಿ ಆತುರಾತುರವಾಗಿ ೩ ನಿಮಿಷದಲ್ಲಿ ಹೇಳಿ, ೨ ನಿಮಿಷದಲ್ಲಿ ಹೇಳಿ ಅಂದರೆ ಅಷ್ಟು ಪ್ರಾವೀಣ್ಯತೆ ಏಕೆ ಇರುತ್ತದೆ ಅಧ್ಯಕ್ಷರೆ. ಅವರು ಇನ್ನೂ.....

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ, ನನ್ನ ಅಭ್ಯಂತರವಿಲ್ಲ. ನಾನು ಮ್ಯಾಕ್ಸಿಮಂ ಎಷ್ಟು ದಿವಸ ಕರೆಯುವುದಕ್ಕೆ ಸಾಧ್ಯವೋ ಅಷ್ಟು ದಿವಸ ಕರೆಯುತ್ತೇನೆ. ಆದರೆ.....

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಸಭಾನಾಯಕರ ಮಂತ್ರಿ ನಿಮ್ಮ ಅಭಿಪ್ರಾಯವನ್ನು ತೆಗೆದುಕೊಂಡು ನಾನು ಮಾಡುವುದು. ನಾಳೆ ಮುಖ್ಯಮಂತ್ರಿಗಳು ಇಂಗ್ಲೆಂಡ್‌ಗೆ ಹೋಗಬೇಕು. ಸ್ಪೀಕರ್ ಸಾಹೇಬರು ಅಲ್ಲಿಗೆ ಹೋಗಬೇಕು ಅಷ್ಟರೊಳಗೆ ಸ್ಯಾಂಡ್ ವಿಚ್ ಆಗಬೇಕು ಎನ್ನುವುದು ಸರಿಯಲ್ಲ. ನಾವು ನಿಮಗೆ ಸಹಕಾರ ಕೊಟ್ಟು, ವಿಧಿವತ್ತಾಗಿ ಚರ್ಚಿಸಿ ಒಂದು ಕಾನೂನು ಮಾಡಿದರೆ ಅದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ. ಇಲ್ಲಿಗೆ ನಾವು ಕೆಲಸ ಇಲ್ಲದೆ ಬರುತ್ತೇವೆಯೇ ? ನಾವು ಇಲ್ಲಿ ಜವಾಬ್ದಾರಿಯಿಂದ ಕೂತುಕೊಳ್ಳಬೇಕಾಗಿದೆ. ಬೆಳಿಗ್ಗೆ ೧೧ ಗಂಟೆಯಿಂದ ರಾತ್ರಿ ೮ ಗಂಟೆಯವರೆಗೆ ಕೂತುಕೊಳ್ಳಬೇಕೆಂದರೆ ಮಾನ್ಯ ಲಕ್ಷ್ಮೀಸಾಗರ್‌ರವರಂಥ ಬೈಸ್ಟಾಂಡ್ ಪರ್ಸನ್‌ಗೂ ಸಾಧ್ಯವಾಗುವುದಿಲ್ಲ. ಸಾಯಂಕಾಲ ಆಗುತ್ತಾ

ಆಗುತ್ತಾ ಕೆಲಸ ಮಾಡುವುದಕ್ಕೆ ಆಗುವುದಿಲ್ಲ, ಆಯಾಸವಾಗುತ್ತದೆ. ದಯವಿಟ್ಟು ಈ ರೀತಿ ತೊಂದರೆ ಕೊಡಬಾರದೆಂದು ತಮಗೆ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನಾನು ಒಂದು ಮಾತನ್ನು ಅರಿಕೆ ಮಾಡಿಕೊಳ್ಳುತ್ತೇನೆ. ತಮಗೆ ಗೊತ್ತಿರುವ ಹಾಗೆ, ವಿರೋಧ ಪಕ್ಷದ ನಾಯಕರು ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ವಿಧಾನಮಂಡಲದ ಸಮಿತಿಗಳ ಅನೇಕ ವರದಿಗಳನ್ನು ಈ ವರ್ಷ ನಮ್ಮ ಮುಂದೆ ಸಲ್ಲಿಸಿವೆ. ನನಗೆ ತಿಳಿದ ಮಟ್ಟಿಗೆ ನಾನು ಈ ಮನೆಯಲ್ಲಿ ಅನೇಕ ವರ್ಷಗಳಿಂದ ಇದ್ದೇನೆ. ಈ ಮನೆಗೆ ಕೊಟ್ಟಿರುವಂಥ ವರದಿಗಳ ಮೇಲೆ ಚರ್ಚೆಯಾಗಿಲ್ಲ. ಪಿ.ಎ.ಸಿ. ಮತ್ತು ಪಿ.ಯು.ಸಿ ಹಾಗೂ ಇನ್ನಿತರ ಸಮಿತಿಗಳ ಪ್ರತಿ ವರ್ಷದ ವರದಿಗಳನ್ನು ಸರ್ಕಾರಕ್ಕೆ ಈ ಮನೆಯ ಮೂಲಕ ಸಲ್ಲಿಸುತ್ತಿವೆ. ಸರ್ಕಾರಕ್ಕೆ ತಿಳುವಳಿಕೆ ಕೊಡುವಂಥ, ಎಚ್ಚರಿಕೆ ಕೊಡುವಂಥ ವಿಷಯಗಳು ಇರುತ್ತವೆ. ಇವುಗಳ ಬಗ್ಗೆ ಚರ್ಚೆಯಾಗುತ್ತಿಲ್ಲ. ಇತ್ತೀಚೆಗೆ ನಮ್ಮ ಪ್ರಜಾಪ್ರಭುತ್ವ ಪರಂಪರೆಯ ಕಡಿಮೆಯಾಗುತ್ತಿರುವುದು ಕಂಡು ಬರುತ್ತಿದೆ. ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಇರುವುದರಿಂದ ಪಕ್ಷಾತೀತವಾಗಿ ಸಭೆ ಸೇರಬೇಕೆಂದು ಎಂದು ಹೇಳಬಹುದಾದರೂ, ಬಹಳ ಮುಖ್ಯವಾದ ವಿಷಯಗಳ ಮೇಲೆ ಚರ್ಚೆ ಮಾಡಲೇಬೇಕಾಗುತ್ತದೆ. ಇವತ್ತು ಓಟ್ ಆನ್ ಅಕೌಂಟ್ ತೆಗೆದುಕೊಂಡು ಚರ್ಚೆ ಮಾಡಬಹುದು. ೫–೬ ಮಂತ್ರಿಗಳಿಗೆ ಸೇರಿದಂಥ ವಿಷಯವನ್ನು ಒಂದೇ ಸಾರಿ ಹಾಕಿ ೫–೫ ನಿಮಿಷ ಚರ್ಚೆಗೆ ಅವಕಾಶ ಕೊಟ್ಟರೆ ಯಾವ ವಿಷಯವನ್ನು ತಾನೇ ಇಲ್ಲಿ ಹೇಳುವುದಕ್ಕಾಗುತ್ತದೆ.

ಅಧ್ಯಕ್ಷರು.—ಓಟ್ ಆನ್ ಅಕೌಂಟ್ ತೆಗೆದುಕೊಂಡು ಮಾಡಿ ಎಂದು ಹೇಳುತ್ತಿದ್ದೀರಿ ?

ಶ್ರೀ ಎಂ. ಎಸ್. ಕೃಷ್ಣನ್.—ಡಿಸೆಂಬರ್ ಮಂಗಳಂ ಒಂದು ವಾರ ಸಭೆ ಸೇರಿದರೆ ರಿಪೋರ್ಟ್‌ಗಳ ಬಗ್ಗೆ ಚರ್ಚೆ ಮಾಡಲಾವುದಕ್ಕೆ ಅವಕಾಶವಾಗುತ್ತದೆ. ಇದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಸದನಕ್ಕೆ ಏನು ವರದಿ ಕೊಡುತ್ತಾರೆ, ಅದರ ಬಗ್ಗೆ ಅವಕಾಶ ಕೊಟ್ಟರೆ ವಿಶ್ಲೇಷಣೆ ಮಾಡಬಹುದು. ೧೭೦ ಕೋಟಿ ರೂಪಾಯಿ ನಷ್ಟವಾಗುತ್ತದೆಂದು ಹೇಳುತ್ತಾರೆ, ಚರ್ಚೆ ಮಾಡುವುದಕ್ಕೆ ಅವಕಾಶ ಕೊಡದೇ ಇದ್ದರೆ ನ್ಯಾಯ ಒದಗಿಸಿದಂತಾಗಲಿಲ್ಲವೆಂದಿಲ್ಲ.

ಶ್ರೀ ಬಿ. ಜಿ. ಕೊಟ್ರಪ್ಪ.—ಸ್ವಾಮಿ, ನನಗೆ ಬಾಯಿ ಇಲ್ಲ, ಅವಕಾಶ ಜಾಸ್ತಿ ಕೊಟ್ಟರೆ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಈ ಸಭೆ ಹೆಚ್ಚು ದಿನ ಕೆಲಸ ಮಾಡಬಾರದೆಂದು ನಾವು ಏನೂ ನಿರ್ಧಾರ ಮಾಡಿಲ್ಲ. ಆದಷ್ಟು ಹೆಚ್ಚು ಸಮಯ ರಾಜ್ಯದ ಆಡಳಿತದ ಬಗ್ಗೆ, ರಾಜ್ಯದ ಅನೇಕ ವಿಷಯಗಳ ಬಗ್ಗೆ ಇಲ್ಲಿ ಚರ್ಚೆಯಾಗಬೇಕು. ಜನರ ಅಭಿಪ್ರಾಯಗಳನ್ನು ತಿಳಿದು, ಆ ಹಿನ್ನೆಲೆಯಲ್ಲಿ ಈ ಸಭೆ ತೆಗೆದುಕೊಳ್ಳಬೇಕಾದ ನಿರ್ಣಯದ ಬಗ್ಗೆ ತೀರ್ಮಾನಗಳ ಬಗ್ಗೆ ಸರ್ಕಾರದ ನೀತಿ ನಿರೂಪಣೆಗಳ ಬಗ್ಗೆ ಹೆಚ್ಚು ಸಮಯ ಚರ್ಚೆ ಮಾಡಬೇಕೆಂಬುದನ್ನು ನಾವು ಒಪ್ಪಿಕೊಳ್ಳುತ್ತೇನೆ. ಆದರೆ, ೫ ಗಂಟೆಗೆ ಎದ್ದು ಹೋಗುತ್ತೇವೆ, ೫ ನಿಮಿಷ ಜಾಸ್ತಿ ಕೂತುಕೊಳ್ಳುವುದಿಲ್ಲ ಎನ್ನುವುದು ಸರಿಯೇ ? ಒಂದೊಂದು ಸಲ ಕೆಲಸದ ಒತ್ತಡದಿಂದ ಹೆಚ್ಚು ಸಮಯ ಕೂತುಕೊಳ್ಳಬೇಕಾಗುತ್ತದೆ. ಎಲ್ಲಾ ದೇಶಗಳಲ್ಲಿಯೂ ಈ ಪರಿಪಾಠ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಪಾರಿಷಿಸ್‌ನಲ್ಲಿ ಇದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಹೊರ ದೇಶದ್ದು ಬೇಡ, ನಮ್ಮ ಪಾರ್ಲಿಮೆಂಟ್‌ನಲ್ಲಿ ಇದೆ.

೬-೦೦ ಪಿ.ಎಂ.

ಶ್ರೀಮತಿ ನಾಗರತ್ನಮ್ಮ.—ಅಧ್ಯಕ್ಷರೆ, ನಾನು ಆ ಮಾತನ್ನು ಹೇಳಲಿಲ್ಲ. ಅವರು ನೆನ್ನೆ ಹೇಳಿದರು, ಎರಡು ಮೂರು ದಿವಸದಿಂದಲೂ ಒಂದೇ ತರಹ ೫ ಗಂಟೆಗೆ ಮುಂಗಿಯಬೇಕೆಂದು ಹೇಳುತ್ತಿದ್ದಾರೆ. ಆದರೆ ನಾವು ಮಾಡುವುದು ಮಾಡುತ್ತಿದ್ದೇವೆ. ಆಷ್ಟು ತಾತ್ಸಾರವಾಗಿ ಹೇಳಿದರೆ ಹೇಗೆ? ನಾನು ಇಲ್ಲಿ ಕುಳಿತುಕೊಂಡಿದ್ದೇನೆ, ಅಲ್ಲಿ ಎಲ್ಲಿಯಾದರೂ ಕುಳಿತು ಕೊಂಡಿದ್ದರೆ ಆ ತರಹ ಮಾತ

ನಾಡಿದರೂ ಪರವಾಯಿಲ್ಲ, ನಾನು ಇಲ್ಲಿ ಕುಳಿತುಕೊಂಡ ಮೇಲೆ ಕೊನೆಯವರೆಗೂ ಇರಬೇಕಾದ್ದು ನನ್ನ ಜವಾಬ್ದಾರಿ. ಅಲ್ಲಿ ಎಲ್ಲಿಯಾದರೂ ಹಿಂದೆ ಕುಳಿತುಕೊಂಡಿದ್ದರೆ ಹಾಗೆ ಹೊರಟು ಹೋಗಬಹುದಾಗಿತ್ತು. ಇಲ್ಲಿ ಕುಳಿತುಕೊಂಡಿರುವುದರಿಂದ ಸ್ವಲ್ಪ ಜವಾಬ್ದಾರಿ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಮಾನ್ಯ ನಾಯಕರು ಹೇಳಿದ್ದನ್ನು ಪ್ರಸ್ತಾಪ ಮಾಡಿದೆ ಅಷ್ಟೆ, ಅವರು ಹೇಳಿದ್ದಕ್ಕೆ ಜವಾಬು ಹೇಳಲಿಲ್ಲ. ಅವರು ಏನು ಕೇಳಿಸಿಕೊಂಡರೋ ಗೊತ್ತಿಲ್ಲ. ನನ್ನ ತಿಳುವಳಿಕೆಯ ಆಧಾರದ ಮೇಲೆ ಹೇಳುವುದಾದರೆ ಈ ರೀತಿ ಗಂಟೆ ನಿಮಿಷ ಇಟ್ಟುಕೊಂಡು ೫ ಗಂಟೆಗೆ ಹೇಳಬೇಕೆಂದರೆ, ೧೭ ಹವರ್ಸ್ ಎಂದು ನಿಯಮದಲ್ಲಿದೆ, ೫ ಗಂಟೆಗೆ ಎದ್ದಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ವಾದಕ್ಕೆ ಪ್ರತಿವಾದ ಮಾಡಿದರೆ ಪ್ರಯೋಜನ ಇಲ್ಲ. ಗಂಟೆಗೆ ಎದ್ದಿರುವುದು ಒಂದೇ ದಿವಸ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದನ್ನು ಕೇಳಿದ್ದೇನೆ. ಅವರು ಹೇಳುವಾಗ ನಾನು ಚಕಾರ ಎತ್ತಲಿಲ್ಲ, ಹಾಗೆಯೇ ನಾನು ಹೇಳುವುದನ್ನು ಅವರು ಕೇಳತಕ್ಕಂಥ ಸೌಜನ್ಯ ತೋರಿಸಬೇಕೆಂದು ಕೇಳುತ್ತೇನೆ. ನಾನು ಹೇಳಬಾರದ್ದನ್ನು ಹೇಳಲೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೇಳಲಿ, ಹೇಳಲಿ.....

ಶ್ರೀ ಎ. ಲಕ್ಷ್ಮೀಸಾಗರ್.—ಇವರು ಹೇಳಲಿ, ಹೇಳಲಿ ಎನ್ನುವುದು, ಕೂತಂಕೊಳ್ಳಿ, ಕೂತು ಕೊಳ್ಳಿ ಎನ್ನುವುದು, ಇದೇ ಇವರ ಕೆಲಸ. ರೂಲ್ಸ್ ಎಲ್ಲರಿಗೂ ಗೊತ್ತಿದೆ. ನೀವು ಮಂತ್ರಿಗಳಾಗಿದ್ದಾಗ ಯಾವರೀತಿ ಮಾಡಿಸ್ತಿದ್ದಿರಿ ಎನ್ನುವುದಕ್ಕೆ ನಾನು ಜೀವಂತ ಸಾಕ್ಷಿ ಇಲ್ಲೇ ಇದ್ದೇನೆ. ನವ್ಮಿ ಹೇಳಿಕೆಯನ್ನು ಒಪ್ಪಿಕೊಳ್ಳಬಹುದು ಅಥವಾ ಬಿಡಬಹುದು. ಆದರೆ ವಿರೋಧಪಕ್ಷದ ನಾಯಕರು ಹೇಳಿದ ಮೇಲೆ ನಾನು ಹೇಳುವುದು ಬೇಡ ಅಂದರೆ ನಾನು ಕುಳಿತು ಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ; ಮಾನ್ಯ ಸಾಗರ್‌ರವರ ಒಂದು ಹೇಳಿಕೆ, ಅಥವಾ ಭಾಷಣ ಮಾಡುವುದನ್ನು ಕೇಳುವುದು ನವ್ಮ ಸೌಭಾಗ್ಯ.

ಅಧ್ಯಕ್ಷರು.—ಅವರು ಪ್ರೊಫೆಸರ್ಸ್ ಅವರು ಹೇಳಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಬಂಗಾರಪ್ಪನವರು, ಈ ಮನೆಯ ಗೌರವ ಉನ್ನತೋನ್ನತ ಶಿಖರ. ನಾನು ಈಚೆಗೆ ಬಂದವನು.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಹೆಚ್ಚು ಸಮಯ ಕುಳಿತುಕೊಳ್ಳಬೇಕು ಎನ್ನುವುದರಲ್ಲಿ ನಿರ್ವಿವಾದ, ಒಂದು ಮಾತು ಅವರ ಕಡೆಯಿಂದ ಬಂದಿದ್ದಕ್ಕೆ ನಾನು ಹೇಳಿದೆ, ೫ ಗಂಟೆಗೆ ಏಳಬೇಕು ಎನ್ನತಕ್ಕದ್ದು ನಿಯಮದಲ್ಲಿದೆ. ಆದರೆ ಅನೇಕ ಸಮಯದಲ್ಲಿ ನಾವು ಹೆಚ್ಚು ಹೊತ್ತು ಕಾರ್ಯ ಕಲಾಪ ಮಾಡಿರುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಪಾರ್ಲಿಮೆಂಟಿನಲ್ಲಿಯೂ ಸಹ ನಡೆಯುತ್ತದೆ, ಅದೇ ರೀತಿ ಬೇರೆ ಬೇರೆ ಶಾಸನಸಭೆಗಳಲ್ಲಿ ಈ ಪರಿಪಾಠ ಇದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವರ್ಷದಲ್ಲಿ ಈ ದಿವಸವೂ ಸೇರಿದರೆ ೪೮ ದಿವಸ ಆಗಿದೆ ಎಂದು ಹೇಳಲಿಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಹಿಂದೆ ನಡೆದಿದ್ದಕ್ಕೆ ೫೦ ಪರ್ಸೆಂಟ್ ಆಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಜಾಸ್ತಿ ಹೊತ್ತು ಕುಳಿತುತೊಳ್ಳಬೇಕು ಎನ್ನುವುದನ್ನು ಒಪ್ಪಿಕೊಂಡಿದ್ದೇನೆ. ಇದು ಶಾಸನ ಸಭೆ, ಇದರ ಮುಖ್ಯ ಕರ್ತವ್ಯ ಶಾಸನ ರಚನೆ, ತದನಂತರ ಇತರೇ ವಿಷಯಗಳನ್ನು ಮಾಡಬೇಕೆಂದು ಇದೆ, ಅನೇಕ ಸರ್ಕಾರಿ ಮಂತ್ರಿ ಖಾಸಗಿ ವಲಯದಲ್ಲಿ ಕೆಲಸಮಾಡತಕ್ಕ ಸಂಸ್ಥೆಗಳು ಇದೆ. ಹೆಚ್ಚು ಜವಾಬ್ದಾರಿಯಿಂದ ಕೆಲಸ ಮಾಡತಕ್ಕ ಸಂಸ್ಥೆ ಇದೆ. ಕಾನೂನು ಪ್ರಕಾರ ಅವುಗಳ ವರದಿಯನ್ನು ಶಾಸನಸಭೆಯಲ್ಲಿ ಇಡಬೇಕೆಂದು ಕಾನೂನು ಇದೆ. ಆ ರೀತಿ ವರದಿಗಳನ್ನು ನಾವು ಈ ಸಭೆಯಲ್ಲಿ ಇಡುತ್ತಾ ಬಂದಿದ್ದೇವೆ. ಅವುಗಳ ಬಗ್ಗೆ ನಾವು ಇಲ್ಲಿ ವಿಚಾರ ಮಾಡುವುದಕ್ಕೆ ಸಾಧ್ಯವಾಗಲಿಲ್ಲ ಎಂದು ಪ್ರಸ್ತಾಪ ಮಾಡಿದ್ದಾರೆ. ಇದು ಬಹಳ ಮುಖ್ಯವಾದುದು. ಅದನ್ನು ಇಲ್ಲಿ

ಚರ್ಚೆಮಾಡಬಾರದೆಂದು ನಾನು ಯಾವತ್ತೂ ಕೂಡ ವಿರೋಧ ಮಾಡಿಲ್ಲ. ಆಕಡೆ ಇದ್ದಾಗಲೂ ಕೂಡ ಹೇಳಿದ್ದೇನೆ. ಆದರೆ ಅದು ಆಗಲಿಲ್ಲ ಹೆಚ್ಚಿಗೆ ಸಮಯ ಕುತುಕೊಂಡಾಗಲೂ ಅದು ಆಗಲಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಈಗ ನೀವು ಮಾಡಿಬಿಡಿ.

ಶ್ರೀ ಎ. ಲಕ್ಷ್ಮೀಸಾಗರ್ —ಈ ಸದನ ಯಾವ ಯಾವ ದಿವಸ ಎಷ್ಟೆಷ್ಟು ಹೊತ್ತಿಗೆ ಕೂತು ಏನೇನು ಕಾರ್ಯ ಕಲಾಪಗಳನ್ನು ಮಾಡಬೇಕೆಂದು ಬಿಸಿನೆಸ್ ಅಡ್ವೈಸರಿ ಕಮಿಟಿ ಮಿಾಟಿಂಗ್‌ನಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ.....

ಶ್ರೀ ಎಂ.ಎಸ್. ಕೃಷ್ಣನ್.—ತಾವು ಹೇಳುತ್ತಿರುವುದನ್ನು ನಾನು ವಿರೋಧ ಮಾಡುತ್ತಿಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿಯನ್ನು ಮೊದಲೇ ಕರೆದು ತೀರ್ಮಾನ ಮಾಡಿದರೆ ಪರವಾಗಿಲ್ಲ. ಆದರೆ ಎಲ್ಲಾ ವಿಚಾರಗಳನ್ನೂ ಮೊದಲೇ ತೀರ್ಮಾನ ಮಾಡಿಕೊಂಡು ಅನಂತರ ಬಿಸಿನೆಸ್ ಅಡ್ವೈಸರಿ ಕಮಿಟಿ ಮಿಾಟಿಂಗ್ ಕರೆಯುವುದು ಸರಿಯಲ್ಲ. ಅದರಿಂದ ಏನು ಪ್ರಯೋಜನವಾಗುತ್ತದೆ ?

ಶ್ರೀ ಎ. ಲಕ್ಷ್ಮೀಸಾಗರ್.—ನಾವು ಬಿಸಿನೆಸ್ ಅಡ್ವೈಸರಿ ಕಮಿಟಿ ಮಿಾಟಿಂಗ್‌ನ್ನು ಕರೆದು ಇಷ್ಟು ಶಾಸನ ರಚನೆಗಳಿವೆ, ಸದನದಲ್ಲಿ ಇಷ್ಟಿಂಥ ಕಾರ್ಯಕಲಾಪಗಳು ಆಗಬೇಕಾದರೆ ಯಾವಯಾವ ದಿವಸ ಎಷ್ಟೆಷ್ಟು ಹೊತ್ತು ಕೂತುಕೊಳ್ಳಬೇಕೆಂಬುದನ್ನು ತೀರ್ಮಾನಿಸಬೇಕೆಂದು ಹೇಳಿ, ಅದರ ತೀರ್ಮಾನವನ್ನು ಸದನಕ್ಕೆ ತಿಳಿಸಿ ಅದರ ಪ್ರಕಾರವೇ ಕಾರ್ಯಕಲಾಪಗಳನ್ನು ನಡೆಸಿಕೊಂಡು ಬಂದಿದ್ದೇವೆ. ಆದರೆ ಯಾವತ್ತೂ ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನದ ಪ್ರಕಾರ ಇಲ್ಲಿ ಕಾರ್ಯಕಲಾಪಗಳು ನಡೆದಿಲ್ಲ ವೆಂದು ಹೇಳುವುದು ಸರಿಯಲ್ಲ. ಮಾನ್ಯ ಸದಸ್ಯರಾದ ಕೊಟ್ರಪ್ಪನವರಿಗೆ ನಾನು ಒಂದು ಮಾತನ್ನು ಹೇಳುತ್ತೇನೆ. ನೀವು ಆಳುವ ಪಕ್ಷದಲ್ಲಿದ್ದೀರಿ. ನೀವು ಏನು ಹೇಳಬೇಕೋ, ಎಷ್ಟು ಹೇಳಬೇಕೋ, ತಮ್ಮ ಅಭಿಪ್ರಾಯ ಏನಿದೆ ಎಂಬುದನ್ನು ಪರಿಪೂರ್ಣವಾಗಿ ತಿಳಿಸುವುದಕ್ಕೆ ತಮಗೆ ಅಧಿಕಾರವಿದೆ.....

ಶ್ರೀ ಬಿ.ಜಿ. ಕೊಟ್ರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಹೇಳುತ್ತೇನೆ .....

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ.....

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಪೂರ್ಣವಾಗಿ ಇನ್ನೂ ಏನನ್ನೂ ಹೇಳಿಲ್ಲ.....

ಶ್ರೀ ಬಿ.ಜಿ. ಕೊಟ್ರಪ್ಪ.—ಮಾನ್ಯ ಮಂತ್ರಿಗಳು ಒಂದು ನಿಮಿಷ ಈಲ್ಡ್ ಆದರೆ ನಾನು ಒಂದು ಮಾತನ್ನು ಹೇಳುತ್ತೇನೆ.....

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರಾದ ಕೊಟ್ರಪ್ಪನವರು ಆಳುವ ಪಕ್ಷಕ್ಕೆ ಸೇರಿದ್ದರೂ ಕೂಡ ಅವರು ಈ ಸದನದ ಕಾರ್ಯಚರಣೆಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸುವ ಬಗ್ಗೆ, ಅಥವಾ ಅವರು ಇಲ್ಲಿ ಕೆಲಸ ಮಾಡುವ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಮಾಡ ಬಹುದು. ಅದಕ್ಕೆ ನಾವು ಯಾರೂ ಕೂಡ ಅಡ್ಡ ಬಂದಿಲ್ಲ.....

(ಗೊಂದಲ)

ಆದರೆ ಅದಕ್ಕೂ ಒಂದು ಸೀಮಾರೇಖೆ ಇದೆಯೆಂದು ನಾನು ಹೇಳಿದೆ. ಅದು ಈ ಪಕ್ಷದಲ್ಲಾಗಲಿ, ಆ ಪಕ್ಷದಲ್ಲಾಗಲಿ ಒಂದು ಸೀಮಾ ರೇಖೆ ಇದೆ ಎಂಬುದನ್ನು ನಾನು ಅವರ ಗಮನಕ್ಕೆ ತಂದೆ ಅಷ್ಟೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಅವರಿಗೆ ಬೆದರಿಕೆ ಹಾಕುತ್ತಿದ್ದಾರೆ. ಹಾಗೆ ಮಾಡಬಾರದೆಂದು ಹೆದರಿಸುತ್ತಿದ್ದಾರೆ.....

ಶ್ರೀ ಎ. ಲಕ್ಷ್ಮೀಸಾಗರ್.—ಈ ಪ್ರಜಾಪ್ರಭುತ್ವದಲ್ಲಿ ಹೆದರಿಕೊಳ್ಳಬೇಕಾದ್ದು ಏನೂ ಇಲ್ಲ ನಾನು ಯಾರನ್ನೂ ಹೆದರಿಸುತ್ತಿಲ್ಲ. ಈ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಹೆದರಿಸತಕ್ಕ ಪ್ರವೃತ್ತಿ ಇಲ್ಲ.....

ಶ್ರೀ ಆರ್. ವೆಂಕಟರಾಮಯ್ಯ.—ನಾಚಿಕೆಪಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನಾಚಿಕೆ ನೀವು ಪಡಬೇಕು. ಅನುಭವ ಸಿದ್ಧಾಂತದ ಹಿನ್ನೆಲೆಯೂ ನಾನು ಈ ಮಾತನ್ನು ಹೇಳಿದ್ದೇನೆ. ಆದರೆ ಹೇಳಬಾರದ್ದನ್ನು ಸಾನೇನೂ ಇಲ್ಲಿ ಹೇಳಿಲ್ಲ. ಇಷ್ಟಾದರೆಲ್ಲಿ

ಕೂಡ ಪಕ್ಷದ ಶಾಸ್ತ್ರ ಮುಖ್ಯ. ಪಕ್ಷದಲ್ಲಿ, ಬಹುಮತದ ಯಾವ ಯಾವ ಪಕ್ಷಕ್ಕೆ ಸೇರಿರುತ್ತಾರೆ, ಆಮೇಲೆ ಆಯಾಯ ಪಕ್ಷದ ನಿರ್ಣಯಕ್ಕೆ ಪಕ್ಷವನ್ನು ನಡೆದುಕೊಳ್ಳಬೇಕಾದ್ದು ಅವಶ್ಯಕವಿದೆ.

ಇದನ್ನು ನೆನಪು ಮಾಡಿದ್ದೇನೆ. ಆದರೆ ಇಷ್ಟು ಹೇಳಿದರೂ ಕೂಡ ಮಾನ್ಯ ಕೊಟ್ರಪ್ಪನವರು ಆಗಲಿ, ಬೇರೆಯವರಾಗಲಿ ಸಭೆಯು ನಿಯಮಾವಳಿಯ ಸೀಮಾರೇಖೆಯೊಳಗೆ ಅವರಿಗೆ ಏನೇನು ಅಧಿಕಾರ ಇದೆ ಅದನ್ನು ಕಸಿದುಕೊಳ್ಳುವುದಕ್ಕೆ ಆಗುವುದಿಲ್ಲ. ಯಾರ ಕೈಯಲ್ಲೂ ಕಸಿದುಕೊಳ್ಳುವುದಕ್ಕೆ ಆಗುವುದಿಲ್ಲ. ನಿಯಮಾವಳಿ ಪ್ರಕಾರ, ಸಂವಿಧಾನದ ಪ್ರಕಾರ ಅದು ಸಾಧ್ಯವಿಲ್ಲವೆಂದು ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಬಿ. ಕೊಟ್ರಪ್ಪ.—ನೀವು ಆಳುವ ಪಕ್ಷದವರು, ಸುಮ್ಮನೆ ಕುಳಿತುಕೊಳ್ಳಿ ಎಂದು ಹೇಳುತ್ತೀರಿ. ನಾವು ಏನು ಹೇಳುವುದಕ್ಕೆ ಹೋದರೂ ಅವರು ಹೆದರಿಸುತ್ತಾರೆ.

ಅಧ್ಯಕ್ಷರು.—ನಿಮ್ಮ ಲೀಡರ್, ನಿಮ್ಮ ಪಕ್ಷದ ನಾಯಕರ ವತಿಯಿಂದ ಏನು ಹೇಳಬೇಕೋ ಅದನ್ನು ಅವರು ಹೇಳಲಿ, ಮತ್ತೆ ನೀವು ಏತಕ್ಕೆ ಹೇಳುತ್ತೀರಿ ಎಂದು ಕೇಳುತ್ತೇನೆ. ನಿಮ್ಮ ಲೀಡರ್ ಹೇಳಿದ್ದಾರೆ ಸಾಕೆಂದು. ಮತ್ತೆ ನೀವು ಏತಕ್ಕೆ ಹೇಳುತ್ತೀರಿ ?

ಶ್ರೀ ಬಿ. ಬಿ ಕೊಟ್ರಪ್ಪ.—ಮಾನ್ಯ ಮಂತ್ರಿಯವರಿಗೆ ಹೇಳುತ್ತೇನೆ. ನಾವು ಸಹ ಪಕ್ಷದ ತತ್ವಗಳನ್ನು ತಿಳಿದುಕೊಂಡು ಇಲ್ಲಿ ಕುಳಿತಿದ್ದೇವೆ. ತತ್ವವನ್ನು ಬೋಧನೆ ಮಾಡಿಸಿಕೊಂಡು ಕೇಳತಕ್ಕಂಥ ಪರಿಸ್ಥಿತಿಯಲ್ಲಿ ಆ ಕಡೆಯವರಾಗಲಿ. ಈ ಕಡೆಯವರಾಗಲಿ ನಾವು ಯಾರೂ ಇಲ್ಲ. ಆದರೆ ನಮಗೆ ಸೀಮಿತ ಇದೆ. ನಾವು ಕತ್ತು ಹಿಡಿದು ಹೆದರಿಸತಕ್ಕಂಥ ಪರಿಸ್ಥಿತಿಯಲ್ಲಿಯೂ ನಾವು ಇಲ್ಲ. ನಮ್ಮ ಸರ್ಕಾರ ತಪ್ಪು ಮಾಡಿದ ರೀತಿಯಲ್ಲಿ ನಡೆದುಕೊಳ್ಳಲಿ ಎಂದು ಮಂತ್ರಿಗಳಿಗಾಗಲಿ ಸರ್ಕಾರಕ್ಕಾಗಲಿ ತಿಳುವಳಿಕೆಯನ್ನು ಕೊಡತಕ್ಕಂಥ ಹಕ್ಕು ನಮಗೆ ಇದೆ. ನಮ್ಮ ಪಕ್ಷದ ಒಳಗೆ ಇರತಕ್ಕಂಥದ್ದು ಬೇರೆ ಶಾಸಕಾಂಗದ ಒಳಗೆ ವಿವರಣೆಯನ್ನು ಕೊಡತಕ್ಕಂಥದ್ದು ಬೇರೆ. ಎರಡನ್ನೂ ಒಂದೇ ಮಾಡತಕ್ಕಂಥ ರೀತಿಯಲ್ಲಿ ಮಾನ್ಯ ಮಂತ್ರಿಗಳು ಹೇಳಬಾರದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮನ್ನು ಹಗಲೆಲ್ಲಾ ಕೂರಿಸಬೇಡಿ. ನಮ್ಮ ಮನಸ್ಸಿನಲ್ಲಿರುವಂತೆ ಹೇಳುವುದಕ್ಕೆ ಅವಕಾಶವನ್ನು ಕೊಡಿ ಎಂದು ಈಗಲೂ ಕೂಡ ಹೇಳುತ್ತೇನೆ. ಕಾಲಮಿತಿಯನ್ನು ಹಾಕಬೇಡಿ. ಮೊದಲು ೧೦ ದಿವಸಗಳೆಂದು ಪ್ರಿಂಟ್ ಮಾಡಿಸಿ ಹೇಳಿ, ಮತ್ತೆ ಕಮಿಟಿ ಸೇರಿ, ಈಗ ಇಷ್ಟಾಗುತ್ತದೆಂದು ಹೇಳತಕ್ಕಂಥ ಪರಿಸ್ಥಿತಿಯಲ್ಲಿ ತರಬಾರದು. ವಿಷಯಗಳನ್ನು ಹೇಳಬೇಕಾದಂಥ ಪರಿಸ್ಥಿತಿಯಲ್ಲಿ ಹೇಳಲೇ ಬೇಕಾಗುತ್ತದೆ. ನಾವು ಇಲ್ಲಿ ಹೇಳದೆ ಇನ್ನೆಲ್ಲಿ ಹೇಳಲು ಸಾಧ್ಯವಾಗುತ್ತದೆ ? ಪಬ್ಲಿಕ್ ಮೀಟಿಂಗ್‌ನಲ್ಲಿ ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ, ಇಲ್ಲ ನ್ಯಾಷನಲ್ ಕಾಲೇಜ್ ಮೈದಾನ್‌ನಲ್ಲಿ ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ ? ನಮ್ಮನ್ನು ಬಡಿದು ಕೂಡಿಸಬೇಡಿ. ಅವರಿಗೆ ಅವಕಾಶವನ್ನು ಕೊಟ್ಟಹಾಗೆ ನಮಗೂ ಅವಕಾಶವನ್ನು ಕೊಡಿ ಆಗ ನಮಗೆ ನಾವು ಹೇಳಬೇಕಾದ್ದನ್ನು ಹೇಳಲು ಸಾಧ್ಯವಾಗುತ್ತದೆ ಇಷ್ಟೇ ನನ್ನ ವಿನಂತಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹೇಳಿದಂತೆ ಮಾನ್ಯ ಕೊಟ್ರಪ್ಪನವರು ಗ್ರಹಿಸಿದ ಹಾಗೆ ಕಾಣಲಿಲ್ಲ. ನಾವು ಅವರ ಹಕ್ಕುಗಳನ್ನು ಚಲಾಯಿಸಲು ಅಡ್ಡಿ ಬರಲಿಲ್ಲ. ಸರ್ಕಾರ ತಪ್ಪು ಮಾಡಿದರೆ ಸರ್ಕಾರ ತಪ್ಪು ಮಾಡುತ್ತಿದೆ ಎಂದು ಹೇಳತಕ್ಕಂಥ ಅಧಿಕಾರವನ್ನು ಯಾರು ಕಸಿದುಕೊಳ್ಳುವುದಕ್ಕಾಗುವುದಿಲ್ಲವೆಂದು ಆ ಒಂದು ಅಂಶವನ್ನು ಮೊದಲೇ ಹೇಳಿದ್ದೇನೆ ಮತ್ತೆ ಏತಕ್ಕೆ ಹೇಳಿದರೋ ನನಗೆ ಅರ್ಥವಾಗುತ್ತಿಲ್ಲ. ಅವರು ಹೇಳಿದಂಥ ಮಾತನ್ನು ಗವನಿಸದಲ್ಲಿಟ್ಟುಕೊಳ್ಳುತ್ತೇವೆಂದು ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಎರಡು ಕಡೆಯವರೂ ಕೂಡ ಕೊಟ್ಟಂಥ ಅಭಿಪ್ರಾಯಗಳನ್ನು ಕೇಳಿದ್ದೇನೆ. ಸಭಾನಾಯಕರು ಕೂಡ ನಿಮ್ಮೆಲ್ಲರ ಅಭಿಪ್ರಾಯಗಳನ್ನು ವಿಚಾರ ವಿನಿಮಯ ಮಾಡಿ ಎಲ್ಲರಿಗೂ ಅನುಕೂಲವಾಗುವಂತೆ ಪ್ರಯತ್ನ ಮಾಡುತ್ತಾರೆಂದು ನಾನು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ವಿಧಾನ ಸಭೆಯಲ್ಲಿ ನಡೆಯುತ್ತಿರತಕ್ಕಂಥ ವಿದ್ಯಮಾನಗಳು, ಇಲ್ಲಿ ನಡೆಯುತ್ತಿರತಕ್ಕಂಥ ಚಟುವಟಿಕೆಗಳಿಂದ ಪ್ರಜಾಪ್ರಭುತ್ವದ ಯಾವ ಒಂದು ಫಂಡಮೆಂಟಲ್ ರೈಟ್ಸ್ ಇದೆ ಅದನ್ನು ಹತ್ತಿಕ್ಕತಕ್ಕಂಥ ರೀತಿಯಲ್ಲಿ ಈ ಸರ್ಕಾರ ನಡೆಯುತ್ತಿದೆ.

ಅವರ ಯಜಮಾನಿಕೆಯಲ್ಲಿ ನಡೆಯುತ್ತಿದೆ. ತಮ್ಮ ಅಧ್ಯಕ್ಷತೆಯಲ್ಲಿ ಈ ವಿಧಾನ ಸಭೆಯಲ್ಲಿ ಈ ರೀತಿ ನಡೆಯಬಾರದೆಂದು ನೋಂತ್ತೇನೆ. ಇದು ಸದನದ ಒಮ್ಮತದ ಅಭಿಪ್ರಾಯ.

ಅಧ್ಯಕ್ಷರು.—ಸಂಪ್ರದಾಯ ಬಂದಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಾಧಾರಣವಾಗಿ ಒಮ್ಮತದ ಅಭಿಪ್ರಾಯ... ತಾವು ನೋಡಿದ್ದೀರಿ, ನಾವು ನೋಡಿದ್ದೇವೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಿಮ್ಮೆಲ್ಲರ ಅಭಿಪ್ರಾಯವು ನನಗೆ ಗೊತ್ತಾಗಿದೆ. ಇದನ್ನು ಗಮನದಲ್ಲಿಟ್ಟುಕೊಳ್ಳೋಣ. ಈಗ ಈ ವಿಷಯವನ್ನು ಇಷ್ಟಕ್ಕೆ ಸಾಕು ಮಾಡೋಣ. ಇದೊಂದು ಪ್ರಕಟಣೆ ಲೋಕೋಪಯೋಗಿ ಸಚಿವರು ವಿಧಾನ ಪರಿಷತ್ತಿನಲ್ಲಿದ್ದಾರೆ. ಮಾನ್ಯ ಲಕ್ಷ್ಮೀಸಾಗರ್‌ರವರದು ಇನ್ನೊಂದು ಚರ್ಚೆ ಇದೆ. ಅದನ್ನು ತೆಗೆದುಕೊಳ್ಳೋಣ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಹೇಳಿದ ವಿಚಾರ ಬಹಳ ಅಗತ್ಯವಿದೆ. ಮಾನ್ಯ ಮಂತ್ರಿಗಳು ಇಲ್ಲಿಲ್ಲ ಎನ್ನುವ ಒಂದು ಕಾರಣಕ್ಕೋಸ್ಕರ...

ಅಧ್ಯಕ್ಷರು.—ನಿನ್ನೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಈವತ್ತು ರಾತ್ರಿ ಎಷ್ಟೊತ್ತಾದರೂ ವಂಗಿ ಸೋಣವೆಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಆ ಮನೆಯಲ್ಲಿದ್ದಾರೆ. ಎಲ್ಲರಿಗೂ ಸಾಕಾಗಿದೆ, ಮುಂತ್ತೆ ವಿಚಾರವಮಾಡೋಣ. ಈಗ ಸಾಕು ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದರ ಬಗ್ಗೆ ಹೇಳಲಿಲ್ಲ.

ಅಧ್ಯಕ್ಷರು.—ಈಗ ನಿಯಮ ೧೫೮ರ ಮೇರೆಗಿನ ಪ್ರಸ್ತಾವವನ್ನು ತೆಗೆದುಕೊಳ್ಳೋಣ. ಅದರ ಬಗ್ಗೆ ಪ್ರಸ್ತಾಪ ಮಾಡಿ ೧೫ ನಿಮಿಷದಲ್ಲಿ ಮುಗಿಸಬೇಕು. ಒಂದೊಂದಾಗಿ ತೆಗೆದುಕೊಳ್ಳೋಣ. ಮಂತ್ರಿಗಳು ಆ ಮನೆಯಲ್ಲಿದ್ದಾರೆ, ಬರಲಿ.

ನಿಯಮ 158ರ ಮೇರೆಗೆ ಪ್ರಸ್ತಾವನೆ

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ, ಈ ನಾನು ಕೆಳಗಿನ ಪ್ರಸ್ತಾವನೆಯನ್ನು ಮಂಡಿಸುತ್ತೇನೆ.

> ವಿದ್ಯುಚ್ಛಕ್ತಿ ದರವನ್ನು ಅಸಮರ್ಥನೀಯವಾಗಿ ಹೆಚ್ಚಿಸಿರುವ ಸರ್ಕಾರದ ಕ್ರಮಕ್ಕೆ ಸದನವು ಅಸಮ್ಮತಿಯನ್ನು ಸೂಚಿಸುತ್ತಾ ಅದನ್ನು ಈ ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಈ ಸದನವು ಒತ್ತಾಯಿಸುತ್ತದೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

† ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಒಂದು ಸಂತೋಷ ಏನೆಂದರೆ, ಈ ಚರ್ಚೆಗೆ ಬರುತ್ತಿರುವುದು ತಮಗೂ ಬೇಜಾರಾಗಿದೆ, ಎಲ್ಲರಿಗೂ ಬೇಜಾರಾಗಿದೆ.

ಅಧ್ಯಕ್ಷರು.—ನನಗೇನೂ ಬೇಜಾರಾಗಿಲ್ಲ.

ಶ್ರೀ ಎಂ. ಎಸ್.ಕೃಷ್ಣನ್.—ನಿಮಗಿಂತ ಜಾಸ್ತಿ ಮಾನ್ಯ ಮಂತ್ರಿಗಳಿಗೆ ಸಿಕ್ಕಾಪಟ್ಟೆ ಬೇಜಾರಾಗಿದೆ. ಏನ್ನೆ ಹೇಳಿದರು, ಏಕೆ ಸುಮ್ಮನೆ ಕಂಠ ಶೋಷಣೆ ಮಾಡಿಕೊಳ್ಳುತ್ತೀರಿ ಎಂದು. ಇದು ಬೇಜಾರಿನಿಂದ ಆಡಿದ ಮಾತಾದರೂ ಪ್ರಶ್ನೆ ಬಹಳ ಗಹನವಾದುದಾಗಿರುವುದರಿಂದ ಇದನ್ನು ತಮ್ಮ ಮೂಲಕ ಸಭೆಯ ಗಮನಕ್ಕೆ ತರುತ್ತಿದ್ದೇನೆ. ವಿದ್ಯುಚ್ಛಕ್ತಿ ದರಗಳನ್ನು ಏರಿಸಿರುವ ಪ್ರಶ್ನೆ ಕೆಳದ ೩ ತಿಂಗಳಿನಿಂದ ನಮ್ಮ ರಾಜ್ಯದಲ್ಲಿ ಎಲ್ಲರ ಮನಸ್ಸನ್ನು ಕದಡಿದೆ. (ಮಾನ್ಯ ಪಟೇಲ್ ಒಬ್ಬರನ್ನುಬಿಟ್ಟು) ಎಲ್ಲಾ ಕಡೆ ಹಾಹಾಕಾರ ಎದ್ದಿದೆ. ಯಾರೋ ಒಬ್ಬರೂ ರಾಜಕಾರಣಿಗಳು ಮಾತ್ರವಲ್ಲ, ಎಲ್ಲಾ ಜನರು ಇದರ ಬಗ್ಗೆ ಮಾತನಾಡುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಇದಕ್ಕೆ ಮುಖ್ಯತ್ವ ಇದೆ. ಎಲ್ಲಕ್ಕಿಂತ ಮುಖ್ಯ ವಾದದ್ದು ಸರ್ಕಾರ ಧೋರಣೆ ವಿದ್ಯುಚ್ಛಕ್ತಿ ಬಗ್ಗೆ ಇರತಕ್ಕದ್ದು. ಆ ಧೋರಣೆ ಸರಿಯಾಗಿದೆಯೋ ಇಲ್ಲವೆ, ವಿದ್ಯುಕ್ತಿ ದರವನ್ನು ಏರಿಸುವುದಕ್ಕೆ ಸಕಾರಣ ಇದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸುವ